ಯಾರನ್ನು ಪರಮಾತ್ಮನೇ ಕರೆಯುತ್ತಾನೋ ಅವರು ಮತ್ತೆ ಈ ಪ್ರಪಂಚಕ್ಕೆ ಮರಳಲು ಹೇಸುತ್ತಾರೆ.

### ವಾಸಿಸಲು ಬಂದಿದೆ ನನ್ನಾತ್ಮ

ವಾಸಿಸಲು ಬಂದಿದೆ ನನ್ನಾತ್ಮ – ಈ ದೇಹವೆಂಬ ನಿರ್ಜನ ಅರಣ್ಯದಲ್ಲಿ;
ಕುಸಿಯುತ್ತಿದೆ, ಬೇಗ ಬೇಗ, ಈ ಕಾಲನದಿಯ ದಂಡೆ;
ಅದು ಖಂಡಿತ ಕುಸಿದು ಬೀಳುತ್ತದೆ, ಇಂದಲ್ಲದಿದ್ದರೆ ನಾಳೆ.
ಇಂತಹ ದಂಡೆಯ ಬಳಿ ವಾಸಿಸುತ್ತಾ, ಪ್ರವಾಸಿಯು ಹೇಗೆ ತಾನೇ ಶಾಂತಿಯಿಂದ ಮಲಗಬಲ್ಲ?
ಎಲ್ಲಿ ಮರಳು ಮತ್ತು ನೀರು ಸೇರುತ್ತವೆಯೋ, ಅಲ್ಲಿ ಯಾವ ಕಟ್ಟೆ ದೃಢವಾಗಿರುತ್ತದೆ, ಬಹು?

### ಈ ದೇಹವೊಂದು ದೇವಾಲಯ

ಈ ದೇಹ ನನ್ನೊಡೆಯನ ದೇವಾಲಯ; ಅದರೊಳಗನ್ನು ಇಣುಕಿ ನೋಡು.
ಓ ಅನ್ವೇಷಕನೆ! ನಿನಗೆ ಯಾವ ದೇವದೂತನ ಸಹಾಯವೂ ಬೇಕಿಲ್ಲ; ಜೀವಜಲ ನಿನ್ನೊಳಗೇ ಇದೆ.
ಹೃದಯದೊಳಗಿರುವ ಕತ್ತಲೆಯನ್ನು ದೂರಮಾಡಲು ಪ್ರೇಮದ ದೀಪವನ್ನು ಹತ್ತಿಸು ಮತ್ತು ಬಹು ಹಿಂದೆ ಕಳೆದುಕೊಂಡ ಸಂಪತ್ತನ್ನು ಕಂಡುಹಿಡಿ.
ಯಾರು ಈ ರಹಸ್ಯವನ್ನು ಗ್ರಹಿಸುತ್ತಾರೋ ಅವರು ಸಾವಿಗೆ ಮೊದಲೇ ಸಾಯುತ್ತಾರೆ.

### ದೇವರು ಸೃಷ್ಟಿಯನ್ನು ಸಂಕಲ್ಪಿಸಿದಾಗ

ದೇವರು ಸೃಷ್ಟಿಯನ್ನು ಸಂಕಲ್ಪಿಸಿದಾಗ ನಾವು ಅವನೊಡನೆ ಇದ್ದೆವು;
ಅವನ ಗುಣಗಳನ್ನು ನಾವು ಪಡೆದಿದ್ದೆವು, ಅವನ 'ಮೂಲತತ್ವ' ನಾವಾಗಿದ್ದೆವು;
ಅವನಿಂದ ಬೇರ್ಪಟ್ಟಮೇಲೆ, ಅವನನ್ನು ಹುಡುಕುತ್ತಾ ನಾವು ಎಲ್ಲೆಡೆ ಅಲೆಯುತ್ತಿದ್ದೇವೆ.
ಒಂದು ಕಾಲದಲ್ಲಿ ನಾವು ಪರಿಶುದ್ಧ ತತ್ವಗಳ ನಾಡಿನಲ್ಲಿ ವಾಸವಾಗಿದ್ದೆವು;
ಈಗ ಈ ಮರ್ತ್ಯದೇಹದಲ್ಲಿ ಬಂದಿಗಳಾಗಿ, ನೋವಿನಿಂದ ಚೀರುತ್ತಿದ್ದೇವೆ.
ನಮ್ಮ ಮೂಲ ನಾಡಿನಲ್ಲಿ, ನಾವು ಅಕಳಂಕರಾಗಿದ್ದೆವು,
ನಮ್ಮ ಕೀಳುತನವೇ ನಮ್ಮನ್ನೆಲ್ಲಾ ಮಲಿನಗೊಳಿಸಿತು.

(ಆಧಾರ: ಜೇಮ್ಸ್ ಎಲ್. ಎಲಿಯಾಸ್ ಅವರ ಇಂಗ್ಲೀಷ್ ಅನುವಾದ)

ರೇಖಾಚಿತ್ರಗಳು: ಈಶ್ವರ ಬಡಿಗೇರ

### ಆಧಾರ ಗ್ರಂಥಗಳು

1. Anjum, Tanvir, "Bridal Symbolism in the Sufi Poetry of Islamicate South Asia," Pakistan Journal of History and Culture, Vol. Xxxiv, No. 1, 2013.
2. Elias, James L, Death Before Dying: The Sufi Poems of Sultan Bahu, Univ. Of Cal. Press, 1998.
3. Losensky, Paul, & Sunil Sharma, In the Bazar of Love: Selected Poetry of Amir Khusro, Penguin, 2011.
4. Poemhunter.com, Internet Archive, 2012.
5. Yamunacharya, "The Mysticism of Nammalvar," Triveni Journal, March 1945.